ಸುಮಶ್ರೀಸಂಸ್ಕಾರಮಾಲಿಕೆ - **001**

# ಬಾಲಸಂಸ್ಕಾರತರಂಗಿಣೀ

SUMASHRI THE SANSKRIT GURU

SMS

ŚRUTAM ME GOPĀYA

ಸುಮಶ್ರೀ ಸಂಸ್ಕೃತ ಗುರು

ಪುಸ್ತಕದ ಹೆಸರು – ಬಾಲಸಂಸ್ಕಾರತರಂಗಿಣೀ

ಎಲ್ಲಾ ಹಕ್ಕುಗಳನ್ನು "ಸುಮಶ್ರೀ ಸಂಸ್ಕೃತ ಗುರು" ಸಂಸ್ಥೆಯು ಹೊಂದಿರುತ್ತದೆ.

ಪ್ರಕಾಶಕರು – ಸುಮಶ್ರೀ ಸಂಸ್ಕೃತ ಗುರು

ಮುದ್ರಣೆ – ೨೪/೦೫/೨೦೨೧

ಪುಟಗಳು – ೧೨

ಮೌಲ್ಯ – ೫೦/-

ಪ್ರಕಾಶನೆ ಮತ್ತು ವಿತರಣೆ - ಸುಮಶ್ರೀ ಸಂಸ್ಕೃತ ಗುರು

ಸಂಪರ್ಕಸೂಚಿ -

www.sumashri.com

sumashri.sms@gmail.com

+919008543122

Sumashri SMS

sumashri.com

ಓಂ

## ಪ್ರಾರ್ಥನಾ ಶ್ಲೋಕಗಳು

### ಗಣಪತಿಪ್ರಾರ್ಥನಾ

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ|

ಯನ್ನತ್ವಾ ಕೃತಕೃತ್ಯಾಃ ಸ್ಯುಃ ತಂ ನಮಾಮಿ ಗಜಾನನಮ್||

### ಗುರುವಂದನಾ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ|

ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ||

### ಸರಸ್ವತೀನಮಸ್ಕಾರಃ

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ|

ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ||

### ದಕ್ಷಿಣಾಮೂರ್ತಿಪ್ರಾರ್ಥನಾ

ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಮ್|

ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ||

sumashri.com

# ಸಂವತ್ಸರ ಪರಿಚಯ

ಪ್ರಭವೋ ವಿಭವಃ ಶುಕ್ಲಃ ಪ್ರಮೋದಶ್ಚ ಪ್ರಜಾಪತಿಃ|

ಅಂಗಿರಾಃ ಶ್ರೀಮುಖೋ ಭಾವೋ ಯುವಾ ಧಾತಾ ತಥೈವ ಚ||೧||

ಈಶ್ವರೋ ಬಹುಧಾನ್ಯಶ್ಚ ಪ್ರಮಾಥೀ ವಿಕ್ರಮೋ ವೃಷಃ|

ಚಿತ್ರಭಾನುಃ ಸ್ವಭಾನುಶ್ಚ ತಾರಣಃ ಪಾರ್ಥಿವೋ ವ್ಯಯಃ||೨||

ಸರ್ವಜಿತ್ ಸರ್ವಧಾರೀ ಚ ವಿರೋಧೀ ವಿಕೃತಿಃ ಖರಃ|

ನಂದನೋ ವಿಜಯಶ್ಚೈವ ಜಯೋ ಮನ್ಮಥದುರ್ಮುಖೌ||೩||

ಹೇವಿಲಂಬೀ ವಿಲಂಬೀ ಚ ವಿಕಾರೀ ಶಾರ್ವರೀ ಪ್ಲವಃ|

ಶುಭಕೃತ್ ಶೋಭಕೃತ್ ಕ್ರೋಧೀ ವಿಶ್ವಾವಸುಪರಾಭವೌ||೪||

ಪ್ಲವಂಗಃ ಕೀಲಕಸ್ಸೌಮ್ಯಃ ಸಾಧಾರಣವಿರೋಧಿಕೃತ್|

ಪರಿಧಾವೀ ಪ್ರಮಾದೀ ಚ ಆನಂದೋ ರಾಕ್ಷಸೋ ನಲಃ||೫||

ಪಿಂಗಲಃ ಕಾಲಯುಕ್ತಶ್ಚ ಸಿದ್ಧಾರ್ಥೀ ರೌದ್ರದುರ್ಮತೀ|

ದುಂದುಭೀ ರುಧಿರೋದ್ಗಾರೀ ರಕ್ತಾಕ್ಷೀ ಕ್ರೋಧನಃ ಕ್ಷಯಃ||೬||

sumashri.com

1. ಪ್ರಭವಃ
2. ವಿಭವಃ
3. ಶುಕ್ಲಃ
4. ಪ್ರಮೋದಃ
5. ಪ್ರಜಾಪತಿಃ
6. ಅಂಗಿರಸ್
7. ಶ್ರೀಮುಖಃ
8. ಭಾವಃ
9. ಯುವಾ
10. ಧಾತಾ
11. ಈಶ್ವರಃ
12. ಬಹುಧಾನ್ಯಃ
13. ಪ್ರಮಾಥೀ
14. ವಿಕ್ರಮಃ
15. ವೃಷಃ
16. ಚಿತ್ರಭಾನುಃ
17. ಸ್ವಭಾನುಃ
18. ತಾರಣಃ
19. ಪಾರ್ಥಿವಃ
20. ವ್ಯಯಃ
21. ಸರ್ವಜಿತ್
22. ಸರ್ವಧಾರೀ
23. ವಿರೋಧೀ
24. ವಿಕೃತಿಃ
25. ಖರಃ
26. ನಂದನಃ
27. ವಿಜಯಃ
28. ಜಯಃ
29. ಮನ್ಮಥಃ
30. ದುರ್ಮುಖಃ
31. ಹೇವಿಲಂಬೀ
32. ವಿಲಂಬೀ

33. ವಿಕಾರೀ
34. ಶಾರ್ವರೀ
35. ಪ್ಲವಃ
36. ಶುಭಕೃತ್
37. ಶೋಭಕೃತ್
38. ಕ್ರೋಧೀ
39. ವಿಶ್ವಾವಸುಃ
40. ಪರಾಭವಃ
41. ಪ್ಲವಂಗಃ
42. ಕೀಲಕಃ
43. ಸೌಮ್ಯಃ
44. ಸಾಧಾರಣಃ
45. ವಿರೋಧಿಕೃತ್
46. ಪರಿಧಾವೀ
47. ಪ್ರಮಾದೀ
48. ಆನಂದಃ
49. ರಾಕ್ಷಸಃ
50. ನಲಃ
51. ಪಿಂಗಲಃ
52. ಕಾಲಯುಕ್ತಃ
53. ಸಿದ್ಧಾರ್ಥೀ
54. ರೌದ್ರಃ
55. ದುರ್ಮತಿಃ
56. ದುಂದುಭಿಃ
57. ರುಧಿರೋದ್ಗಾರೀ
58. ರಕ್ತಾಕ್ಷೀ
59. ಕ್ರೋಧನಃ
60. ಕ್ಷಯಃ

ಎಂಬುದಾಗಿ ಅರವತ್ತು ಸಂವತ್ಸರಗಳನ್ನು ತಿಳಿಯುವುದು.

## ಅಯನ ಪರಿಚಯ

ಭಾನೋರ್ಮಕರಸಂಕ್ರಾಂತೇಃ ಷಣ್ಮಾಸಾ ಉತ್ತರಾಯಣಮ್|

ಕರ್ಕಾದೇಸ್ತು ತಥೈವ ಸ್ಯಾತ್ ಷಣ್ಮಾಸಾ ದಕ್ಷಿಣಾಯನಮ್ ||

1. ಉತ್ತರಾಯಣಮ್
2. ದಕ್ಷಿಣಾಯನಮ್

ಸೂರ್ಯನು ಮಕರರಾಶಿಯಿಂದ ಮಿಥುನರಾಶಿಯವರೆಗೆ ಸಂಚರಿಸುವ ಕಾಲಕ್ಕೆ ಉತ್ತರಾಯಣವೆಂದೂ, ಕರ್ಕರಾಶಿಯಿಂದ ಧನೂರಾಶಿಯವರೆಗೆ ಸಂಚರಿಸುವ ಕಾಲಕ್ಕೆ ದಕ್ಷಿಣಾಯನವೆಂದೂ ಕರೆಯಲಾಗುತ್ತದೆ. ಈ ಪ್ರಕಾರ ಒಂದು ಸಂವತ್ಸರಕ್ಕೆ ಎರಡು ಅಯನಗಳನ್ನು ತಿಳಿಯುವುದು.

sumashri.com

## ಋತು ಪರಿಚಯ

ವಸಂತಗ್ರೀಷ್ಮಕೌ ಚೈವ ವರ್ಷರ್ತುಶರದೌ ತಥಾ|

ಹೇಮಂತಶಿಶಿರೌ ಚೈವ ಷಡೇತೇ ಋತವಃ ಸ್ಮೃತಾಃ ||

ಒಂದು ಸಂವತ್ಸರಕ್ಕೆ ಆರು ಋತುಗಳು. ವಸಂತ-ಋತು, ಗ್ರೀಷ್ಮ-ಋತು, ವರ್ಷ-ಋತು, ಶರದೃತು, ಹೇಮಂತ-ಋತು, ಶಿಶಿರ-ಋತು. ಈ ಋತುಗಳನ್ನು ಎರಡೆರಡು ತಿಂಗಳುಗಳಿಗೆ ಒಂದೊಂದರಂತೆ ಹನ್ನೆರಡು ತಿಂಗಳುಗಳಿಗೆ ಆರು ಋತುಗಳನ್ನು ತಿಳಿಯುವುದು.

## ಮಾಸ ಪರಿಚಯ

ಚೈತ್ರವೈಶಾಖಜ್ಯೇಷ್ಠಾಖ್ಯಾಃ ಆಷಾಢಃ ಶ್ರಾವಣಸ್ತಥಾ|

ಭಾದ್ರಶ್ಚಾಶ್ವಯುಜಶ್ಚೈವ ಕಾರ್ತಿಕೋ ಮಾರ್ಗಶೀರ್ಷಕಃ||

ಪುಷ್ಯಮಾಸೋ ಮಾಘಮಾಸಸ್ತಥಾ ಫಾಲ್ಗುನನಾಮಕಃ|

ಏತೇ ದ್ವಾದಶಮಾಸಾಃ ಸ್ಯುಃ ಚಾಂದ್ರಮಾನೇ ಪ್ರಕೀರ್ತಿತಾಃ||

sumashri.com

1. ಚೈತ್ರಃ
2. ವೈಶಾಖಃ
3. ಜ್ಯೇಷ್ಠಃ
4. ಆಷಾಢಃ
5. ಶ್ರಾವಣಃ
6. ಭಾದ್ರಪದಃ
7. ಆಶ್ವಯುಜಃ
8. ಕಾರ್ತಿಕಃ
9. ಮಾರ್ಗಶೀರ್ಷಃ
10. ಪುಷ್ಯಃ
11. ಮಾಘಃ
12. ಫಾಲ್ಗುನಃ

## ಪಕ್ಷ ಪರಿಚಯ

ದ್ವಾವೇವ ಲೋಕೇ ವಿಖ್ಯಾತೌ ಶುಕ್ಲಕೃಷ್ಣೇತಿ ಪಕ್ಷಕೌ|

ಪ್ರತಿಪತ್-ಪೌರ್ಣಮಾಸ್ಯಂತಂ ಶುಕ್ಲಪಕ್ಷ ಇತಿ ಸ್ಮೃತಃ||

ಪ್ರತಿಪತ್-ದರ್ಶಮಾಸ್ಯಂತಂ ಕೃಷ್ಣಪಕ್ಷ ಇತಿ ಸ್ಮೃತಃ|

ಪ್ರತಿಪತ್ ತಿಥಿಯಿಂದ ಪೂರ್ಣಿಮೆಯವರೆಗೆ ಹದಿನೈದು ದಿನಗಳ ಕಾಲವನ್ನು ಶುಕ್ಲಪಕ್ಷವೆಂದು ಮತ್ತು ಪೂರ್ಣಿಮೆಯ ನಂತರದ ಪ್ರತಿಪತ್ತಿನಿಂದ ಅಮಾವಾಸ್ಯೆಯವರೆಗಿನ ಹದಿನೈದು ದಿನಗಳ ಕಾಲವನ್ನು ಕೃಷ್ಣಪಕ್ಷವೆಂದು ತಿಳಿಯಬೇಕು.

## ತಿಥಿ ಪರಿಚಯ

ಪ್ರತಿಪಚ್ಚ ದ್ವಿತೀಯಾ ಚ ತೃತೀಯಾ ಚ ಚತುರ್ಥಿಕಾ|

ಪಂಚಮೀ ಚ ತಥಾ ಷಷ್ಠೀ ಸಪ್ತಮೀ ಚಾಷ್ಟಮೀ ತಥಾ||

ನವಮೀ ದಶಮೀ ಚೈಕಾದಶೀ ಚ ದ್ವಾದಶೀ ತಥಾ|

ತ್ರಯೋದಶೀಚತುರ್ದಶ್ಯೌ ಪೂರ್ಣಿಮಾ ದರ್ಶನಾಮಿಕಾ||

1. ಪ್ರತಿಪತ್ (ಪಾಡ್ಯ)
2. ದ್ವಿತೀಯಾ (ಬಿದಿಗೆ)
3. ತೃತೀಯಾ (ತದಿಗೆ)
4. ಚತುರ್ಥೀ (ಚೌತಿ)
5. ಪಂಚಮೀ
6. ಷಷ್ಠೀ
7. ಸಪ್ತಮೀ
8. ಅಷ್ಟಮೀ
9. ನವಮೀ
10. ದಶಮೀ
11. ಏಕಾದಶೀ
12. ದ್ವಾದಶೀ
13. ತ್ರಯೋದಶೀ
14. ಚತುರ್ದಶೀ
15. ಪೂರ್ಣಿಮಾ (ಹುಣ್ಣಿಮೆ) ಅಥವಾ ಅಮಾವಾಸ್ಯಾ.

sumashri.com

# <u>ನಕ್ಷತ್ರ ಪರಿಚಯ</u>

ಅಶ್ವಿನೀ ಭರಣೀ ಚೈವ ಕೃತ್ತಿಕಾ ರೋಹಿಣೀ ಮೃಗಃ|

ಆರ್ದ್ರಾಪುನರ್ವಸೂ ಪುಷ್ಯಸ್ತಥಾಽಽಶ್ಲೇಷಾ ಮಘಾ ತಥಾ||

ಪೂರ್ವಾಫಲ್ಗುನಿಕಾ ತಸ್ಮಾದುತ್ತರಾಫಲ್ಗುನೀ ತಥಾ|

ಹಸ್ತಶ್ಚಿತ್ರಾ ತಥಾ ಸ್ವಾತೀ ವಿಶಾಖಾ ತದನಂತರಮ್||

ಅನುರಾಧಾ ತತೋ ಜ್ಯೇಷ್ಠಾ ತಥಾ ಮೂಲಂ ನಿಗದ್ಯತೇ|

ಪೂರ್ವಾಷಾಢೋತ್ತರಾಷಾಢೇ ಅಭಿಜಿಚ್ಛ್ರವಣಂ ತಥಾ||

ಧನಿಷ್ಠಾ ಶತತಾರಾಖ್ಯಾ ಪೂರ್ವಾಭಾದ್ರಪದಾ ತಥಾ|

ಉತ್ತರಾಭಾದ್ರಪದಾ ಚ ಸ್ಯೂ ರೇವತ್ಯೇತಾನಿ ಭಾನಿ ಚ||

1. ಅಶ್ವಿನೀ
2. ಭರಣೀ
3. ಕೃತ್ತಿಕಾ
4. ರೋಹಿಣೀ
5. ಮೃಗಶಿರಃ
6. ಆರ್ದ್ರಾ
7. ಪುನರ್ವಸುಃ
8. ಪುಷ್ಯಃ
9. ಆಶ್ಲೇಷಾ
10. ಮಘಾ
11. ಪೂರ್ವಫಲ್ಗುನೀ(ಹುಬ್ಬಾ)
12. ಉತ್ತರಫಲ್ಗುನೀ(ಉತ್ತರಾ)
13. ಹಸ್ತಾ
14. ಚಿತ್ರಾ(ಚಿತ್ತಾ)
15. ಸ್ವಾತೀ
16. ವಿಶಾಖಾ
17. ಅನೂರಾಧಾ
18. ಜ್ಯೇಷ್ಠಾ
19. ಮೂಲಾ
20. ಪೂರ್ವಾಷಾಢಾ
21. ಉತ್ತರಾಷಾಢಾ
22. ಶ್ರವಣಃ
23. ಧನಿಷ್ಠಾ
24. ಶತಭಿಷಾ
25. ಪೂರ್ವಾಭಾದ್ರಾ
26. ಉತ್ತರಾಭಾದ್ರಾ
27. ರೇವತೀ

(ಅಭಿಜಿತ್ ಎನ್ನುವ ಹೆಸರಿನ ನಕ್ಷತ್ರವನ್ನೂ ಸಹ ಜ್ಯೋತಿಶ್ಶಾಸ್ತ್ರದಲ್ಲಿ ಹೇಳಲಾಗಿದೆ.)

sumashri.com

# ರಾಶಿ ಪರಿಚಯ

ಮೇಷೋ ವೃಷಶ್ಚ ಮಿಥುನಂ ಕರ್ಕಃ ಸಿಂಹಶ್ಚ ಕನ್ಯಕಾ|

ತುಲಾ ಚ ವೃಶ್ಚಿಕಶ್ಚೈವ ಧನುಶ್ಚ ಮಕರಸ್ತಥಾ|

ಕುಂಭಶ್ಚೈವ ತಥಾ ಮೀನಶ್ಚೈತೇ ದ್ವಾದಶರಾಶಯಃ||

1. ಮೇಷಃ
2. ವೃಷಭಃ
3. ಮಿಥುನಃ
4. ಕರ್ಕಾಟಕಃ
5. ಸಿಂಹಃ
6. ಕನ್ಯಾ
7. ತುಲಾ
8. ವೃಶ್ಚಿಕಃ
9. ಧನುಃ
10. ಮಕರಃ
11. ಕುಂಭಃ
12. ಮೀನಃ

sumashri.com

# ಯೋಗಪರಿಚಯ

ವಿಷ್ಕಂಭಃ ಪ್ರೀತಿರಾಯುಷ್ಮಾನ್ ಸೌಭಾಗ್ಯಃ ಶೋಭನಸ್ತಥಾ|

ಅತಿಗಂಡಃ ಸುಕರ್ಮಾ ಚ ಧೃತಿಃ ಶೂಲಸ್ತಥೈವ ಚ ||

ಗಂಡೋ ವೃದ್ಧಿರ್ಧ್ರುವಶ್ಚೈವ ವ್ಯಾಘಾತೋ ಹರ್ಷಣಸ್ತಥಾ|

ವಜ್ರಃ ಸಿದ್ಧಿಃ ವ್ಯತೀಪಾತಃ ವರೀಯಾನ್ ಪರಿಘಃ ಶಿವಃ||

ಸಿದ್ಧಃ ಸಾಧ್ಯಃ ಶುಭಃ ಶುಕ್ಲಃ ಬ್ರಹ್ಮ ಚೈಂದ್ರಶ್ಚ ವೈಧೃತಿಃ |

ಏತೇ ಯೋಗಾಸ್ತುವಿಜ್ಞೇಯಾಃ ಸಪ್ತವಿಂಶತಿಸಂಖ್ಯಕಾಃ ||

1. ವಿಷ್ಕಂಭಃ
2. ಪ್ರೀತಿಃ
3. ಆಯುಷ್ಮಾನ್
4. ಸೌಭಾಗ್ಯಃ
5. ಶೋಭನಃ
6. ಅತಿಗಂಡಃ
7. ಸುಕರ್ಮಾ
8. ಧೃತಿಃ
9. ಶೂಲಃ
10. ಗಂಡಃ
11. ವೃದ್ಧಿಃ
12. ಧ್ರುವಃ

13. ವ್ಯಾಘಾತಃ
14. ಹರ್ಷಣಃ
15. ವಜ್ರಃ
16. ಸಿದ್ಧಿಃ
17. ವ್ಯತೀಪಾತಃ
18. ವರೀಯಾನ್
19. ಪರಿಘಃ
20. ಶಿವಃ
21. ಸಿದ್ಧಃ
22. ಸಾಧ್ಯಃ
23. ಶುಭಃ
24. ಶುಕ್ಲಃ
25. ಬ್ರಹ್ಮ
26. ಐಂದ್ರಃ
27. ವೈಧೃತಿಃ

## ಕರಣ ಪರಿಚಯಃ

ಬವಶ್ಚ ಬಾಲವಃ  ಕೌಲಃ ತೈತಿಲೋ ಗರಜೋ ವಣಿಕ್|

ಭದ್ರಂ ಚ ಶಕುನಿಶ್ಚೈವ ಚತುಷ್ಪಾನ್ನಾಗವಾಂಸ್ತಥಾ|

ಕಿಂಸ್ತುಘ್ನಮಿತಿ ಚೈತಾನಿ ಪ್ರೋಕ್ತಾನಿ ಕರಣಾನಿ ವೈ||

sumashri.com

1. ಬವಃ
2. ಬಾಲವಃ
3. ಕೌಲವಃ
4. ತೈತಿಲಃ
5. ಗರಜಃ
6. ವಣಿಕ್
7. ಭದ್ರಮ್
8. ಶಕುನಿಃ
9. ಚತುಷ್ಪಾತ್
10. ನಾಗವಾನ್
11. ಕಿಂಸ್ತುಘ್ನಮ್

## ವಾರ ಪರಿಚಯ

ಭಾನುಶ್ಚ ಸೋಮವಾರಶ್ಚ ಮಂಗಲೋ ಬುಧಸಂಜ್ಞಕಃ|

ಬೃಹಸ್ಪತಿಃ ಶುಕ್ರಶನೀ ಸಪ್ತವಾರಾಃ ಪ್ರಕೀರ್ತಿತಾಃ||

1. ಭಾನುವಾರಃ
2. ಸೋಮವಾರಃ
3. ಮಂಗಲವಾರಃ
4. ಬುಧವಾರಃ
5. ಗುರುವಾರಃ
6. ಶುಕ್ರವಾರಃ
7. ಶನಿವಾರಃ

## ಶಿಷ್ಟಾಚಾರ

ಹರಿಃ ಓಮ್

ಸುಪ್ರಭಾತಮ್

ಶುಭಮಧ್ಯಾಹ್ನಮ್

ಶುಭಸಾಯಮ್

ನಮಸ್ಕಾರಃ / ನಮಸ್ತೇ

ಶುಭರಾತ್ರಿಃ

ಧನ್ಯವಾದಃ

ಸ್ವಾಗತಮ್

## ನೀತಿಕಥೆ

### ಸಹವಾಸದಂತೆ ಬುದ್ಧಿ

ನಾವು ಸ್ನೇಹಿತರನ್ನು ಆರಿಸಿಕೊಳ್ಳುವಾಗ ಒಳ್ಳೆಯ ಸ್ನೇಹಿತರನ್ನು ಆರಿಸಿಕೊಳ್ಳಬೇಕು. ಕೆಟ್ಟ ಸ್ನೇಹಿತರ ಜೊತೆಗೆ ಹೋದರೆ ಅವರ ಬುದ್ಧಿ ನಮಗೂ ಬರುತ್ತದೆ. ಅದಕ್ಕೆ ಈ ಕೆಳಗಿನ ಕಥೆಯೇ ನಿದರ್ಶನ. ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನು ಪ್ರಾಮಾಣಿಕನೂ, ಸತ್ಯಸಂಧನೂ, ನುಡಿದಂತೆ ನಡೆಯುವವನೂ ಆಗಿದ್ದನು. ಅವನು ಕೆಟ್ಟ ಮಾತುಗಳನ್ನು ಆಡುವವರನ್ನು , ಕೆಟ್ಟ ನಡತೆಯನ್ನು ತೋರುವವರನ್ನು, ಹಿಡಿದು ಶಿಕ್ಷಿಸುತ್ತಿದ್ದನು. ಅದರಿಂದ ಅವನ ರಾಜ್ಯದಲ್ಲಿ ಪ್ರಜೆಗಳು ಯಾವಾಗಲೂ ಒಳ್ಳೆಯ ಮಾತುಗಳನ್ನೇ ಆಡುತ್ತಿದ್ದರು.

sumashri.com

ಒಂದು ದಿನ ರಾಜನು ಕೆಲವು ಬೇಟೆಗಾರರನ್ನು ಕರೆದುಕೊಂಡು ಕಾಡಿಗೆ ಬೇಟೆಗೆ ಹೋದನು. ಅವನ ಜೊತೆಯಲ್ಲಿದ್ದ ಬೇಟೆಗಾರರು ತುಂಬಾ ನುರಿತ ಬೇಟೆಗಾರರಾಗಿದ್ದರು. ಅವರು ಕಾಡಿನಲ್ಲಿ ಹಲವಾರು ಮೃಗಗಳನ್ನು ಕೊಂದು ಮುನ್ನಡೆಯುತ್ತಿದ್ದರು. ರಾಜನು ಉತ್ಸಾಹದಿಂದ ಮುನ್ನುಗ್ಗುತ್ತಿದ್ದನು. ಆಗ ಅಲ್ಲಿಗೆ ಒಂದು ಜಿಂಕೆ ವೇಗವಾಗಿ ಓಡುತ್ತಾ ಬಂದಿತು. ರಾಜನು ಅದನ್ನು ನೋಡಿದನು. ಕೂಡಲೇ ಅದರ ಹಿಂದೆ ತನ್ನ ಕುದುರೆಯನ್ನು ಓಡಿಸಿದನು. ಜಿಂಕೆ ಮತ್ತಷ್ಟು ವೇಗದಿಂದ ಓಡುತ್ತಾ ಒಂದು ದಟ್ಟವಾದ ಮರಗಿಡಗಳಿರುವ ಪ್ರದೇಶವನ್ನು ಹೊಕ್ಕಿತು. ರಾಜನು ಎಷ್ಟು ಪ್ರಯತ್ನಿಸಿದರೂ ಜಿಂಕೆ ಅವನಿಗೆ ಸಿಗಲಿಲ್ಲ. ರಾಜನು ಏನು ಮಾಡಲೂ ತೋಚದೆ ಸುತ್ತಮುತ್ತ ನೋಡಿದನು. ಅವನೊಂದಿಗೆ ಬಂದಿದ್ದ ಬೇಟೆಗಾರರು ಕಾಣಿಸಲಿಲ್ಲ. ರಾಜನಿಗೆ ಯಾವ ಕಡೆಗೆ ಹೋಗಬೇಕೆಂದು ಗೊತ್ತಾಗಲಿಲ್ಲ. ದಿಕ್ಕು ತಪ್ಪಿತು. ಆದರೂ ಧೈರ್ಯಗೆಡದೆ ಕುದುರೆಯನ್ನು ಓಡಿಸುತ್ತಾ ಮುಂದೆ ಮುಂದೆ ಹೋದನು.

ದೂರದಲ್ಲಿ ಅವನಿಗೆ ಕೆಲವು ಗುಡಿಸಲುಗಳು ಕಾಣಿಸಿದವು. ಬೇಟೆಯಾಡಿ ಬಳಲಿದ್ದ ರಾಜ ಅಲ್ಲಿ ಹೋಗಿ ವಿಶ್ರಮಿಸಿಕೊಳ್ಳಬೇಕೆಂದು ನಿಶ್ಚಯಿಸಿ, ಕುದುರೆಯನ್ನು ಗುಡಿಸಲುಗಳ ಬಳಿಗೆ ಓಡಿಸಿದ. ಅಲ್ಲಿ ಒಂದು ಗುಡಿಸಲು ಸ್ವಲ್ಪ ದೊಡ್ಡದಾಗಿತ್ತು. ಆ ಗುಡಿಸಲಿನಲ್ಲಿ ಒಂದು ಪಂಜರವನ್ನು ತೂಗು ಹಾಕಿದ್ದರು. ಆ ಪಂಜರದಲ್ಲಿ ಒಂದು ಮುದ್ದಾದ ಗಿಳಿ ಇದ್ದಿತು. ರಾಜನು ಕುದುರೆಯಿಂದಿಳಿದು ಆ ಗುಡಿಸಲತ್ತ ಹೋದ. ಆಗ ಪಂಜರದಲ್ಲಿದ್ದ ಗಿಳಿ ಇವನನ್ನು ನೋಡಿ, ದೂರದಲ್ಲಿದ್ದ ತನ್ನ ಯಜಮಾನನ್ನು ಕೂಗಿ ಕರೆಯಿತು. ಯಜಮಾನ ಇತ್ತ ತಿರುಗಿದ. ಗಿಳಿ, “ನೋಡಿಲ್ಲಿ .... ಯಾರೋ ಒಬ್ಬ ಈ ಕಡೆಗೆ ಬರುತ್ತಿದ್ದಾನೆ. ಅವನ ಮೈಮೇಲೆ ಬೇಕಾದಷ್ಟು ಬೆಲೆ ಬಾಳುವ ಒಡವೆಗಳಿವೆ. ಬೇಗನೆ ಬಂದು ಅವನನ್ನು ಕೊಲ್ಲು, ಆಭರಣಗಳು ನಿನ್ನದಾಗುತ್ತದೆ" ಎಂದು ಹೇಳಿತು. ರಾಜನು ಅದರ ಮಾತನ್ನು ಕೇಳಿಸಿಕೊಂಡ. ಅದರಿಂದ ಅಲ್ಲಿರುವ ಗುಡಿಸಲುಗಳು, ದರೋಡೆಕಾರರ ಗುಡಿಸಲುಗಳೆಂದು ತಿಳಿಯಿತು. ಕೂಡಲೇ ಕುದುರೆಯನ್ನೇರಿ ವೇಗವಾಗಿ ಕುದುರೆಯನ್ನೋಡಿಸುತ್ತಾ ಮುಂದೆ ಮುಂದೆ ಹೋದನು. ದೂರದಲ್ಲಿ ಗಿಡಮರಗಳ ಮಧ್ಯೆ ಹೊಗೆ ಬರುತ್ತಿರುವುದು ಕಾಣಿಸಿತು. ಅಲ್ಲಿಗೆ ಕುದುರೆಯನ್ನು ಓಡಿಸಿದ. ಅಲ್ಲಿ ಒಂದು ಋಷಿಗಳ ಆಶ್ರಮವಿತ್ತು. ಆಶ್ರಮದ ಪಕ್ಕದಲ್ಲಿ ಗೋಶಾಲೆಯಿತ್ತು, ಆಶ್ರಮದ ಮುಂಭಾಗದಲ್ಲಿ ಹೂತೋಟವಿತ್ತು, ಅಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ನದಿ ಹರಿಯುತ್ತಿತ್ತು. ಅದರ ಜುಳುಜುಳುನಾದ ಕಿವಿಗೆ ಇಂಪಾಗಿ ಕೇಳಿಸುತ್ತಿತ್ತು. ನದಿಯ ದಡದಲ್ಲಿ ಮರಗಳ ಮೇಲೆ ಕೋಗಿಲೆ, ಪಾರಿವಾಳ, ಗಿಳಿ, ಮೊದಲಾದ ಹಕ್ಕಿಗಳು ಕುಳಿತು ತಮ್ಮ ಮಧುರ ಕಂಠದಿಂದ ಹಾಡುತ್ತಿದ್ದವು. ಹೂತೋಟದಲ್ಲಿ ಅಲ್ಲಲ್ಲಿ ನವಿಲುಗಳು ನರ್ತಿಸುತ್ತಿದ್ದವು. ಕೊಳದಲ್ಲಿ ತಾವರೆ ಹೂಗಳು ಅರಳಿದ್ದವು. ಅವುಗಳ ಮಧ್ಯೆ ಹಂಸಗಳು ಕುಳಿತಿದ್ದವು. ಆ ವಾತಾವರಣವನ್ನು ನೋಡಿ ರಾಜನಿಗೆ ತುಂಬಾ ಸಂತೋಷವಾಯಿತು. ಆಶ್ರಮದ ಬಳಿ ಕುದುರೆಯನ್ನು ನಿಲ್ಲಿಸಿ, ಕುದುರೆಯಿಂದ ಇಳಿದು ಆಶ್ರಮದತ್ತ ಹೊರಟ. ಆಶ್ರಮವನ್ನು ಸಮೀಪಿಸುತ್ತಿದ್ದಂತೆ ಅವನಿಗೆ ಅಲ್ಲಿ ಒಂದು ಗಿಳಿ ಕಾಣಿಸಿತು. ಅದೂ ಈ ಹಿಂದೆ ನೋಡಿದ ಗಿಳಿಯಂತೆ ಸುಂದರವಾಗಿತ್ತು ಅದು ರಾಜನನ್ನು ನೋಡಿ, “ಬನ್ನಿ .... ತುಂಬಾ ದೂರದಿಂದ ದಣಿದು ಬಂದಂತೆ ಕಾಣಿಸುತ್ತದೆ. ಸ್ವಲ್ಪ ಹೊತ್ತು ಕೂತು ವಿಶ್ರಾಂತಿ ತೆಗೆದುಕೊಳ್ಳಿ. ಬಳಿಕ ಅಲ್ಲಿ ಕಾಣಿಸುತ್ತಿರುವ ನದಿಗೆ ಹೋಗಿ ಸ್ನಾನ ಮಾಡಿಕೊಂಡು ಬನ್ನಿ. ಆಶ್ರಮದಲ್ಲಿ ಹಣ್ಣು, ಹಾಲು, ಆಹಾರಗಳನ್ನು ಕೊಡುತ್ತಾರೆ. ತಿಂದು ಈ ದಿನವೆಲ್ಲಾ ಇಲ್ಲಿ ವಿಶ್ರಮಿಸಿಕೊಳ್ಳಿ” ಎಂದಿತು. ರಾಜನಿಗೆ ಆ ಗಿಳಿಯ ಮಾತನ್ನು ಕೇಳಿ ತುಂಬಾ ಸಂತೋಷವಾಯಿತು. ನದಿಯಲ್ಲಿ ಹೋಗಿ ಸ್ನಾನ ಮಾಡಿಬಂದನು. ಸ್ವಲ್ಪ

sumashri.com

ಉಲ್ಲಾಸವೆನಿಸಿತು. ಋಷಿಗಳ ಶಿಷ್ಯರು ಬಂದು ಅವನನ್ನು ಆಶ್ರಮದ ಒಳಗೆ ಕರೆದೊಯ್ದರು. ಋಷಿಗಳು ಅವನ ಯೋಗಕ್ಷೇಮವನ್ನು ವಿಚಾರಿಸಿ, ಅವನಿಗೆ ತಿನ್ನಲು ಫಲ, ಆಹಾರಗಳನ್ನು, ಹಾಗೂ ಕುಡಿಯಲು ಹಾಲನ್ನು ಇರಿಸಿಕೊಟ್ಟರು. ರಾಜನು ಅವುಗಳನ್ನು ತಿಂದು, ಹಾಲನ್ನು ಕುಡಿದು, ಸ್ವಲ್ಪ ಸಮಯ ವಿಶ್ರಾಂತಿಯನ್ನು ತೆಗೆದುಕೊಂಡನು. ಬಳಿಕ ಋಷಿಗಳ ಬಳಿಗೆ ಬಂದು, "ಸ್ವಾಮಿ, ನಾನು ನಿಮ್ಮ ಆಶ್ರಮದಲ್ಲಿರುವಂತಹದೇ ಒಂದು ಗಿಳಿಯನ್ನು ಈ ಕಾಡಿನಲ್ಲಿರುವ ಒಂದು ಗುಡಿಸಲಿನಲ್ಲಿ ಕಂಡೆ. ಅದು ನನ್ನನ್ನು ಕೊಲ್ಲಲು ಅದರ ಯಜಮಾನನಿಗೆ ಹೇಳಿತು. ಆದರೆ ನಿಮ್ಮ ಆಶ್ರಮದಲ್ಲಿರುವ ಗಿಳಿ ನನ್ನನ್ನು ಆತ್ಮೀಯತೆಯಿಂದ ಸ್ವಾಗತಿಸಿತು. ಇದೆಲ್ಲ ಏನು? ಈ ಗಿಳಿಗಳಿಗೆ ಅಂತಹ ಬುದ್ಧಿಯನ್ನು ಯಾರು ಕಲಿಸಿಕೊಟ್ಟರು?" ಎಂದು ಕೇಳಿದನು. ಋಷಿಗಳು ಮುಗುಳ್ನಗುತ್ತಾ "ರಾಜಾ, ನೀನು ನೋಡಿದ ಮೊದಲ ಗಿಳಿಯೂ, ಈ ಗಿಳಿಯೂ ಒಂದೇ ತಾಯಿಯ ಮರಿಗಳು. ಆ ಗಿಳಿಯನ್ನು ಒಬ್ಬ ಕಾಡುಗಳ್ಳನು ತೆಗೆದುಕೊಂಡು ಹೋದನು. ಅಲ್ಲಿ ಅದು ಇರುವುದರಿಂದ ಅವರ ಗುಣಗಳನ್ನು ಕಲಿಯಿತು. ಈ ಗಿಳಿಯು ನಮ್ಮ ಆಶ್ರಮವನ್ನು ಸೇರಿತು. ಆದುದರಿಂದ ಇಲ್ಲಿಯ ನಡುವಳಿಕೆಯನ್ನು ಈ ಗಿಳಿ ಕಲಿಯಿತು. ಅದರಿಂದ ಒಳ್ಳೆಯ ಮಾತುಗಳು ಅದರ ಬಾಯಿಂದ ಬರುತ್ತಿವೆ. ಇದು ಸಹವಾಸದ ಫಲ" ಎಂದು ಹೇಳಿದರು. ರಾಜನು ಋಷಿಗಳಿಗೆ ವಂದಿಸಿ, ಅವರ ಆಶೀರ್ವಾದ ಪಡೆದು ತನ್ನ ರಾಜಧಾನಿಗೆ ಹಿಂತಿರುಗಿದನು.

ನೀತಿ: ಒಳ್ಳೆಯವರ ಸಹವಾಸ ಮಾಡಿದರೆ ಒಳ್ಳೆಯ ಬುದ್ಧಿ ಬರುತ್ತದೆ. ಆಗ ಒಳ್ಳೆಯ ಮಾತುಗಳನ್ನು ಮಾತ್ರ ಆಡುತ್ತೇವೆ. ಕೆಟ್ಟವರ ಸಹವಾಸ ಮಾಡಿದರೆ ಕೆಟ್ಟ ಬುದ್ಧಿ ಬರುತ್ತದೆ. ಆಗ ಕೆಟ್ಟ ಮಾತುಗಳನ್ನು ಆಡುತ್ತೇವೆ.

## ಸುಭಾಷಿತ

**ಕ್ಷಣಶಃ ಕಣಶಶ್ಚೈವ ವಿದ್ಯಾಮ್ ಅರ್ಥಂ ಚ ಸಾಧಯೇತ್ ।**
**ಕ್ಷಣೇ ನಷ್ಟೇ ಕುತೋ ವಿದ್ಯಾ ಕಣೇ ನಷ್ಟೇ ಕುತೋ ಧನಮ್॥**

**ಅರ್ಥ** – ಕಣ ಕಣಗಳನ್ನೂ ಬಿಡದೇ ಸಂಪತ್ತನ್ನು ಸಂಪಾದಿಸಬೇಕು ಮತ್ತು ಕ್ಷಣ ಕ್ಷಣಗಳನ್ನು ವ್ಯರ್ಥವಾಗಿಸದೇ ವಿದ್ಯೆಯನ್ನು ಕಲಿಯಬೇಕು. ಈ ಸಾಧನೆಯಲ್ಲಿ ಒಂದು ಕಣ (ಚಿಕ್ಕ ಭಾಗ) ವ್ಯರ್ಥವಾದರೆ ಸಂಪತ್ತು ಹೇಗೆ ಸಿಗುವುದಿಲ್ಲವೋ? ಅದೇ ರೀತಿ ಒಂದು ಕ್ಷಣ ವ್ಯರ್ಥವಾದರೆ ವಿದ್ಯೆಯು ಲಭಿಸುವುದಿಲ್ಲ. ಆದ್ದರಿಂದ ಸಮಯನ್ನು ವ್ಯರ್ಥಮಾಡದೇ ವಿದ್ಯೆಯನ್ನು ಕಲಿಯಬೇಕು.

sumashri.com

## ಉತ್ತರಗಳು

1. ವೇದಗಳು ನಾಲ್ಕು.
2. ನಚಿಕೇತನ ಕಥೆ ಕಠೋಪನಿಷತ್ತಿನಲ್ಲಿದೆ.
3. ಮಹಾಕಾವ್ಯಗಳು ಐದು.
4. ಸಂಸ್ಕೃತದ ಮಹಾಕವಿ ಕಾಳಿದಾಸ.
5. ತಿಥಿ, ವಾರ, ಯೋಗ, ನಕ್ಷತ್ರ, ಮತ್ತು ಕರಣಗಳು ಪಂಚಾಂಗಗಳು.
6. ಈಗ ನಡೆಯುತ್ತಿರುವ ಕಲ್ಪ ಶ್ವೇತವರಾಹಕಲ್ಪ.
7. ಸಂಗೀತಶಾಸ್ತ್ರದ ಪ್ರಕಾರ ಏಳು ಸ್ವರಗಳಿವೆ.
8. ಯುಗಗಳು ನಾಲ್ಕು.
9. ಆನೆ, ಕುದುರೆ, ರಥ ಮತ್ತು ಪದಾತಿಗಳು ಚತುರಂಗಗಳು.
10. ದಾಶರಥಿ ಶ್ರೀರಾಮಚಂದ್ರನ ಹೆಸರು.

sumashri.com

## ರಸಪ್ರಶ್ನೆಗಳು

1. ಸಂವತ್ಸರಗಳು ಎಷ್ಟು?
2. ಭಾರತದೇಶದ ರಾಷ್ಟ್ರಪುಷ್ಪ ಯಾವುದು?
3. ಲಕ್ಷ್ಮಣನ ಪತ್ನಿಯ ಹೆಸರೇನು?
4. ಯಾವ ಹಳ್ಳಿಯನ್ನು ಸಂಸ್ಕೃತಗ್ರಾಮ ಎಂದು ಕರೆಯುತ್ತಾರೆ?
5. ಕಾಲಟಿ ಯಾರ ಜನ್ಮಸ್ಥಾನ?
6. ಆದಿಕವಿ ಯಾರು?
7. ಶಿವನ ವಾಹನ ಯಾವುದು?
8. ನಾಟ್ಯಶಾಸ್ತ್ರದ ಕರ್ತೃ ಯಾರು?
9. ಪಂಚಭೂತಗಳು ಯಾವುವು?
10. ಕಾಶೀಕ್ಷೇತ್ರದಲ್ಲಿರುವ ದೇವಿಯ ಹೆಸರೇನು?

# ಶಾಂತಿಮಂತ್ರ

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ|**

**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ ಭವೇತ್||**

ಅರ್ಥ – ಲೋಕದಲ್ಲಿ ಎಲ್ಲರೂ ಸುಖವಾಗಿರಲಿ, ಎಲ್ಲರೂ ರೋಗಗಳಿಂದ ಮುಕ್ತರಾಗಿ ಆರೋಗ್ಯವಂತರಾಗಿರಲಿ, ಎಲ್ಲರೂ ಒಳ್ಳೆಯದನ್ನೇ ಮಾಡಲಿ ಮತ್ತು ಯಾರೂ ಕೂಡಾ ದುಃಖವನ್ನು ಅನುಭವಿಸದಿರಲಿ.

| ಓಂ ತತ್ ಸತ್ |

**************

ಹೆಚ್ಚಿನವಿವರಗಳಿಗಾಗಿ sumashri.com ಗೆ ಭೇಟಿ ನೀಡಿ.

sumashri.com

